ಅವನು ಕೋಪಿಸಿಕೊಳ್ಳಲಿಲ್ಲ. "ಇಷ್ಟು ವಿಶಾಲವಾದ ಸಾಮ್ರಾಜ್ಯಕ್ಕೆ ಪ್ರಭುವಾಗಿರುವ, ಅಷ್ಟೈಶ್ವರ್ಯಸಂಪನ್ನನಾಗಿರುವ ನನ್ನನ್ನು ಭಿಕ್ಷುಕನೆಂದು ತಾವು ಭಾವಿಸಿದ ರಹಸ್ಯವಾದರೂ ಏನೆಂಬುದನ್ನು ತಿಳಿಯಬಯಸುತ್ತೇನೆ" ಎಂದು ಅರಿಕೆ ಮಾಡಿಕೊಂಡನು. ಆಗ ಆ ಮಹಾತ್ಮರು, "ನೀನು ಸ್ವಲ್ಪಹೊತ್ತಿನ ಮುಂಚೆ ಪೂಜಾಗೃಹದಲ್ಲಿ ಕುಳಿತು, ದೇವರನ್ನು ಕುರಿತು ಅದೆಷ್ಟು ಬಗೆಯ ಸಂಪತ್ತು ನಿನಗೆ ಬೇಕು, ಬೇಕು ಎಂದು ಬೇಡಿಕೊಂಡೆಯೋ –ಅದನ್ನೆಲ್ಲ ನೆನಪಿಸಿಕೋ. ಹಾಗೆಲ್ಲ ಪರಿಪರಿಯಾಗಿ ಬೇಡುವವರು ಭಿಕ್ಷುಕ ರಾಗುವುದಿಲ್ಲವೇ? ಭಿಕ್ಷುಕರಿಂದ ಯಾರಾದರೂ ಏನನ್ನಾದರೂ ಪಡೆದುಕೊಂಡು ಹೋಗುವುದುಂಟೇ? ಮೊದಲು ನಿನ್ನ ಬೇಡಿಕೆ ಗಳೆಲ್ಲ ಈಡೇರಲಿ, ಆ ಬಳಿಕ ನಾನೇ ಬಂದು ನಿನ್ನ ಕಾಣಿಕೆಗಳನ್ನು ಸ್ವೀಕರಿಸುತ್ತೇನೆ" ಎಂದರು.

ಮಹಾತ್ಮರ ಮಾತುಗಳಿಂದ ದೊರೆಯ ಮನಸ್ಸು ಅಲ್ಲೋಲ ಕಲ್ಲೋಲವಾಗಿಬಿಟ್ಟಿತು. "ನಾನು ಏಕಾಂತದಲ್ಲಿ ಬೇಡಿ ಕೊಂಡುದನ್ನು ಈ ಮಹಾತ್ಮರು ಹೇಗೆ ಅರಿತುಕೊಂಡರು" ಎಂಬುದೂ ಪ್ರತಾಪಸಿಂಹನನ್ನು ಅಚ್ಚರಿಯಲ್ಲಿ ಮುಳುಗಿಸಿಬಿಟ್ಟಿತು. ಅಶ್ರುಪೂರ್ಣಲೋಚನನಾಗಿ ಅವರ ಚರಣಕಮಲಗಳ ಮೇಲೆ ಹೊರಳಾಡುತ್ತ, "ಈಗ ನನಗೇನು ಮಾರ್ಗವೋ ಅದನ್ನು ತೋರಿಸಿಕೊಡಿ" ಎಂದು ಪ್ರಾರ್ಥಿಸಿದನು.

ಆಗ ಮಹಾತ್ಮರು ಮಹಾರಾಜನನ್ನು ಕುರಿತು, "ನನಗೆ ದ್ರವ್ಯ ಬೇಕಾಗಿಲ್ಲ, ಸ್ನೇಹಿತರು ಬೇಕಾಗಿಲ್ಲ, ಸುಂದರಿಯರು ಬೇಕಾಗಿಲ್ಲ, ಪಾಂಡಿತ್ಯ ಬೇಕಾಗಿಲ್ಲ, ಮುಕ್ತಿಯೂ ಬೇಕಾಗಿಲ್ಲ. ವಿಷಯವಸ್ತುಗಳ ಮೇಲಿರುವ ನನ್ನ ಪ್ರೀತಿ ನಿನ್ನ ಸೌಂದರ್ಯದ ಮೇಲೆ ಹರಿಯುವಂತೆ ಮಾಡು ಎಂದು ನಾವು ದೇವರನ್ನು ಬೇಡಿಕೊಳ್ಳಬೇಕು. ದೊರೆಯೇ! ನಿನ್ನ ಇಚ್ಛೆಯಾದರೆ ಸಹಸ್ರಾರುಬಾರಿ ನಾನು ಹುಟ್ಟಿಸಾಯುವಂತೆ ಮಾಡು; ಆದರೆ ಜನ್ಮಜನ್ಮಾಂತರಗಳಲ್ಲಿಯೂ ನಾನು ನಿನ್ನನ್ನು ಮಾತ್ರವೇ ಪ್ರೀತಿಸು ವಂತೆ ಅನುಗ್ರಹಿಸು ಎಂದು ಬೇಡಿಕೊಳ್ಳಬೇಕಪ್ಪಾ! ಭಗವಂತನನ್ನು ಕೊಂಡಾಡು, ಭಗವಂತನ ಭಕ್ತರನ್ನು ಕೊಂಡಾಡು, ಅದೇ ದೇವಕಾರ್ಯವೆಂದು ತಿಳಿದುಕೋ. ಯೋಗಿಗಳು ಮಾಡುವ ಅದ್ಭುತಗಳಿಗಾಗಲಿ, ಮಂತ್ರವಾದಿಗಳ ಕೈಚಳಕಗಳಿಗಾಗಲಿ, ಈಗ ನಾನು ನಿನ್ನ ಮನಸ್ಸನ್ನರಿತ ಮಂತ್ರವಾದಿತ್ವಕ್ಕಾಗಲಿ ನೀನು ಮರುಳಾಗಬೇಡ. ಪರಮಾತ್ಮನಿಗಿಂತ ದೊಡ್ಡ ಮಂತ್ರವಾದಿ ಯಾರಿದ್ದಾರೆ! ಎಷ್ಟು ಲೋಕಗಳಿವೆಯೋ ಅದನ್ನು ಕಟ್ಟಿಕೊಂಡು ಏನಾಗಬೇಕು? ಅವುಗಳನ್ನು ಗೆದ್ದು ತಾನೇ ಏನಾಗಬೇಕು? ನನ್ನ ಸಂಬಂಧ ದೇವರೊಡನೆ ಮಾತ್ರವೇ ಇದೆ ಎಂದು ಭಾವಿಸುತ್ತಿರು. ನೀನು ಎಂದಿನಂತೆ ಸಿಂಹಾಸನದಲ್ಲಿರು, ಆದರೆ ನಾನು ಹೇಳಿ ರುವ ಮಾತುಗಳು ನಿನ್ನ ಹೃದಯದಲ್ಲಿ ಅಚ್ಚೊತ್ತಿ ನಿಲ್ಲಲಿ, ನಿನಗೆ ಮಂಗಳವಾಗಲಿ" ಎಂದು ಉಪದೇಶಿಸಿ ಆ ಮಹಾತ್ಮರು ಅರಮನೆಯಿಂದ ಗುರುಮನೆಯತ್ತ ಹೊರಟುಹೋದರು.

---

(ಪುಟ 25ರಿಂದ)

## ರಾಮಕೃಷ್ಣ ಸಂಘ – ಒಂದು ಕಿರು ಪರಿಚಯ

**೨. ಯೋಗ ಸಮನ್ವಯ:** ಸ್ವಾಮಿ ವಿವೇಕಾನಂದರು ಹೇಳುತ್ತಾರೆ, "ಮನುಷ್ಯನಲ್ಲಿ ಈಗಾಗಲೇ ಹುದುಗಿರುವ ದಿವ್ಯತೆಯ ಪ್ರಕಟಣೆಯೇ ಧರ್ಮ. ಅದನ್ನು ಭಕ್ತಿ, ಜ್ಞಾನ, ಕರ್ಮ ಅಥವಾ ಯೋಗದ ಸಹಾಯದಿಂದ ಮಾಡಿರಿ" ಎಂದು. ಅದರಂತೆ ರಾಮಕೃಷ್ಣ ಮಹಾಸಂಘದಲ್ಲಿ ನಾಲ್ಕೂ ಯೋಗಗಳ ಸಮನ್ವಯಕ್ಕೆ ಮಹತ್ವವನ್ನು ನೀಡಲಾಗಿದೆ.

**೩. ಸಹೋದರಪ್ರೇಮ:** ರಾಮಕೃಷ್ಣ ಮಹಾಸಂಘದಲ್ಲಿ ಮೈತ್ರಿ–ಪ್ರೇಮಗಳಿಂದ ಒಂದೇ ಗುರಿಯೆಡೆಗೆ ಸಾಗುವ ಸಂನ್ಯಾಸಿ ಗಳು ಸಂಘಜೀವಿಗಳಾಗಿ ಒಟ್ಟಿಗೆ ನೆಲೆಸುತ್ತಾರೆ; ವಿವಿಧ ಸಂಸ್ಕೃತಿ, ಭಾಷೆ, ದೇಶ ಮತ್ತು ಧರ್ಮಗಳ ಹಿನ್ನೆಲೆಯಿರುವ ಸಾಧಕರು ಪರಸ್ಪರ ಸೇವೆ, ಸಾಧನೆಗಳಲ್ಲಿ ನೆರವಾಗುತ್ತಾ, ಸಾಧನಾಪಥದಲ್ಲಿ ಆನಂದದಿಂದ ಮುಂದುವರೆಯುತ್ತಾರೆ.

**೪. ಸೇವೆ:** ಶ್ರೀರಾಮಕೃಷ್ಣರು 'ಶಿವಜ್ಞಾನೇ ಜೀವಸೇವಾ' – 'ಜೀವಿಯಲ್ಲಿ ಶಿವನನ್ನು ಕಂಡು ಸೇವೆ ಮಾಡು' ಎಂದು ಹೇಳಿದ್ದಾರೆ. ಇದರರ್ಥ, "ಪ್ರತಿಯೊಬ್ಬ ಜೀವಿಯಲ್ಲಿಯೂ ಭಗವಂತನಿದ್ದಾನೆ, ಹೀಗಾಗಿ ಪ್ರತಿಯೊಬ್ಬ ಜೀವಿಯನ್ನೂ ಭಗವಂತನ ವಾಸಸ್ಥಾನವೆಂದು ತಿಳಿದು ಅವನ ಸೇವೆಯನ್ನು ಮಾಡಬೇಕು" ಎಂದು. ಈ ಬಗೆಯ ಸೇವೆ ಬರಿಯ ಸಹಾಯವಲ್ಲ; ಬದಲಾಗಿ ಭಗವಂತನ ಪೂಜೆ; ಉನ್ನತಮಟ್ಟದ ಆಧ್ಯಾತ್ಮಿಕ ಸಾಧನೆಯೂ ಹೌದು. ರಾಮಕೃಷ್ಣ ಮಹಾಸಂಘಕ್ಕೆ ಸೇರಿದ ಸಂನ್ಯಾಸಿಗಳು ಮತ್ತು ಅನುಯಾಯಿ ಭಕ್ತರು ವಿವಿಧ ಸೇವಾಕಾರ್ಯಗಳನ್ನು ಹೃತ್ಪೂರ್ವಕವಾಗಿ, 'ಜನಸೇವೆಯೇ ಜನಾರ್ದನ ಸೇವೆ' ಎಂದು ಭಾವಿಸಿ ಮಾಡುತ್ತಾರೆ. ಈ ಬಗೆಯ ಪರಿಶುದ್ಧ ಭಾವನೆಯಿಂದಲೇ ರೋಗಿಗಳ ಶುಶ್ರೂಷೆ, ಬರ ಪ್ರವಾಹಗಳ ಸಮಯದಲ್ಲಿ ಜನರಿಗೆ ನೆರವು ಮುಂತಾದ ವಿವಿಧ ಬಗೆಯ ಸೇವಾಕಾರ್ಯಗಳನ್ನು ಕೈಗೊಳ್ಳುತ್ತಾರೆ.

**೫. ಭಾವಪ್ರಚಾರ ಪರಿಷತ್ತು :** ಸಂನ್ಯಾಸಿಗಳಲ್ಲದೆ, ಗೃಹಸ್ಥಭಕ್ತರೂ ಇದೇ ತಾತ್ತ್ವಿಕ ನಿಲುವನ್ನು ಹೊಂದಿರುತ್ತಾರೆ. ಈ ಭಾವನೆಯಿಂದ ಯಥಾಶಕ್ತಿ ಸೇವೆಯನ್ನು ಸಲ್ಲಿಸುತ್ತಾರೆ. ಭಕ್ತರು ವಿವಿಧ ಕಡೆಗಳಲ್ಲಿ, ಮಹಾಸಂಘದ ಹಿರಿಯ ಸಂನ್ಯಾಸಿಗಳ ಮಾರ್ಗದರ್ಶನದಲ್ಲಿ, ಭಾವಪ್ರಚಾರ ಕೇಂದ್ರ ಗಳನ್ನು ನಡೆಸುತ್ತಿದ್ದಾರೆ. ಅವುಗಳಲ್ಲಿ 'ಸತ್ಸಂಗ' ಮತ್ತು 'ಸೇವಾ ಕಾರ್ಯ'ಗಳನ್ನು ಆಯೋಜಿಸುತ್ತಿದ್ದಾರೆ.

ಒಟ್ಟಿನಲ್ಲಿ, ಇಡೀ ಜಗತ್ತಿನಲ್ಲಿಯೇ 'ರಾಮಕೃಷ್ಣ ಮಹಾಸಂಘ' ಅತಿ ವಿಶಿಷ್ಟವಾದ ಒಂದು ಸಂನ್ಯಾಸಿ ಸಂಪ್ರದಾಯವಾಗಿದೆ. 'ಶ್ರೀರಾಮಕೃಷ್ಣರ ಭೌತಿಕ ಶರೀರವೇ ಈ ಸಂಘ' ಎಂದು ವಿವೇಕಾನಂದರು ಹೇಳಿದ್ದಾರೆ. ಅದರಂತೆಯೇ ಅದಕ್ಕೆ ಸೇರಿದ ಎಲ್ಲ ಸಂನ್ಯಾಸಿಗಳು ಮತ್ತು ಭಕ್ತರು ಸಂಘದ ಏಳ್ಗೆಗಾಗಿ ಶ್ರದ್ಧಾಭಕ್ತಿಗಳಿಂದ ಸತತವಾಗಿ ದುಡಿಯುತ್ತಿದ್ದಾರೆ.




# ಮುಂಡಕೋಪನಿಷತ್ತು

ರಾಜೇಶ್ವರಿ ಕೃಷ್ಣ

(ಹಿಂದಿನ ಸಂಚಿಕೆಯಿಂದ)

**ಮು**ಂಡಕೋಪನಿಷತ್ತು ಮೊದಲು ಅಪರಾವಿದ್ಯೆಯ ಲಕ್ಷಣಗಳನ್ನು ಹೇಳುತ್ತದೆ. ಅದಾದಮೇಲೆ, ಅಕ್ಷರಬ್ರಹ್ಮದ ಪ್ರಸ್ತಾಪದೊಂದಿಗೆ ಎರಡನೆಯ ಮುಂಡಕವು ಆರಂಭಗೊಳ್ಳುತ್ತದೆ. ಬೆಂಕಿಯಿಂದ ಹೊರಡುವ ಕಿಡಿಗಳಂತೆ ಚೇತನರೂಪರಾದ ಎಲ್ಲ ಜೀವರೂ ಈ ಅಕ್ಷರಬ್ರಹ್ಮದಿಂದಲೇ ಬಂದಿರುವರು. ಹಿರಣ್ಯಗರ್ಭ, ವಿರಾಟ್‌ಪುರುಷ, ದೇವತೆಗಳು, ಮನುಷ್ಯರು, ವೇದಗಳು, ಕರ್ಮ–ಧ್ಯಾನ–ತಪಸ್ಸು, ಇಂದ್ರಿಯಗಳು, ಸುತ್ತಲಿನ ಪ್ರಕೃತಿ – ಎಲ್ಲವೂ ಅವನಿಂದಲೇ ಉಗಮವಾಗಿವೆ. **ಏತಸ್ಮಾಜ್ಜಾಯತೇ ಪ್ರಾಣೋ ಮನಃ** – ಇದರಿಂದಲೇ ಪ್ರಾಣ ಮನಸ್ಸುಗಳು ಹುಟ್ಟುತ್ತವೆ ಎಂಬ ವಾಕ್ಯವು **ಕಸ್ಮಿನ್ನು ಭಗವೋ ವಿಜ್ಞಾತೇ** – ಯಾವುದನ್ನು ತಿಳಿದರೆ, ಎಲ್ಲವನ್ನೂ ತಿಳಿದಹಾಗೆ ಆಗುತ್ತದೆ ಎನ್ನುವ ಶಿಷ್ಯನ ಪ್ರಶ್ನೆಗೆ ಉತ್ತರರೂಪದಲ್ಲಿದೆ. **'ಪುರುಷ'** ನೆಂಬ ತತ್ತ್ವವು ತನ್ನ ಹೃದಯದಲ್ಲಿಯೇ ಇದೆ ಎಂದು ಯಾರು ಅರಿತುಕೊಳ್ಳುತ್ತಾರೋ, ಅವರ ಅವಿದ್ಯಾಗ್ರಂಥಿಯು (ಗಂಟಿನಂತೆ ದೃಢವಾಗಿರುವ ಅವಿದ್ಯಾವಾಸನೆ) ಈ ಜನ್ಮ ದಲ್ಲಿಯೇ ನಾಶವಾಗುತ್ತದೆ. ಎರಡನೆಯ ಖಂಡದಲ್ಲಿ ಅತ್ಯಂತ ಸುಂದರವಾದ ಧನುಸ್ಸಿನ ಕಲ್ಪನೆಯನ್ನು ಬಳಸಿ, ಇಂಥ ಅಕ್ಷರ ಬ್ರಹ್ಮನನ್ನು ಹೊಂದಲು ಬೇಕಾದ ಮಾರ್ಗೋಪಾಯವನ್ನು ಸೂಚಿಸಲಾಗಿದೆ. ಉಪನಿಷತ್ತುಗಳಲ್ಲಿನ ಮಹಾಸ್ತ್ರವಾದ ಓಂಕಾರವೇ ಬಿಲ್ಲು; ಸಾಧಕನು ತಾನೇ ಧ್ಯಾನದಿಂದ ಹರಿತವಾದ (ಸುಸಂಸ್ಕೃತನಾದ) ಬಾಣವಾಗಿ ಪರಿಣಮಿಸುತ್ತಾನೆ. ಆ ಧನುಸ್ಸನ್ನು ಎಳೆದುಕೊಂಡು, ಅಂದರೆ ಜಿತೇಂದ್ರಿಯನಾಗಿ ತಲ್ಲೀನತೆಯಿಂದ 'ಬ್ರಹ್ಮ'ವೆಂಬ ಲಕ್ಷ್ಯಕ್ಕೆ ಹೊಡೆದು, ಬಾಣವು ತನ್ನ ಗುರಿಯನ್ನು ಮುಟ್ಟುವಂತೆ, ಬ್ರಹ್ಮನನ್ನು ಹೋಗಿ ಸೇರಬೇಕು. ಹೀಗೆ 'ಅಹಮಸ್ಮಿ' ಎಂಬ ಸಾಕ್ಷಾತ್ಕಾರವಾದಾಗ, ಎಲ್ಲ ಕಾಮನೆಗಳೂ ನಶಿಸಿಹೋಗುತ್ತವೆ; ಸಂಶಯಗಳು ಕಳೆದುಹೋಗುತ್ತವೆ; ಕರ್ಮಗಳು ಸವೆಯುತ್ತವೆ. ಆಗ ಬುದ್ಧಿ ಪ್ರತ್ಯಯಗಳಿಗೆ ಸಾಕ್ಷಿಯಾಗಿ, ಹೃದಯಪುಂಡರೀಕದಲ್ಲಿರುವ ಆತ್ಮತತ್ತ್ವವು ಬೆಳಗುತ್ತದೆ. **'ತಸ್ಮಿನ್ ದೃಷ್ಟೇ ಪರಾವರೇ'** ಎಂಬ ವಾಕ್ಯವು ಕಾರಣರೂಪವಾದ ಪರಬ್ರಹ್ಮವನ್ನೂ, ಅದೇ ತತ್ತ್ವವು ಕಾರ್ಯರೂಪದಲ್ಲಿ ಅಪರಬ್ರಹ್ಮವಾಗಿ ವ್ಯಕ್ತಗೊಳ್ಳುವುದನ್ನೂ ಸೂಚಿಸುತ್ತದೆ. ಈ ಬೆಳಕು ಎಲ್ಲವನ್ನೂ ಪ್ರಕಾಶಿಸುತ್ತದೆ. ಸೂರ್ಯ, ಚಂದ್ರ, ತಾರೆಗಳು, ಅಗ್ನಿ – ಎಲ್ಲದಕ್ಕೂ ಈ ಬ್ರಹ್ಮನೇ ಬೆಳಕು. **ನ ತತ್ರ ಸೂರ್ಯೋ ಭಾತಿ ನ ಚಂದ್ರ ತಾರಕಂ** – ಜಗತ್ತಿನಲ್ಲಿ ಕಾಣಬರುವ ಜ್ಯೋತಿಯ ಆಕರಗಳಿಗೆ ಕೂಡ ಜ್ಯೋತಿಯಾಗಿರುವ, ಸರ್ವತ್ರ ವ್ಯಾಪಿಸಿರುವ ಈ ಚೈತನ್ಯದ ಬೆಳಕಿಲ್ಲದೆ ಯಾವುದೂ ಬೆಳಗಲಾರದು. ಯಾವ ಋಷಿಯೂ ಕಾಣಲಾಗದ, ಎಲ್ಲ ಬುದ್ಧಿಪ್ರತ್ಯಯಗಳಿಗೆ (ಆಲೋಚನೆಗಳಿಗೆ) ಮೀರಿದ ಈ ಆತ್ಮತತ್ತ್ವದ ಒಂದು ಭವ್ಯವಾದ ವರ್ಣನೆಯನ್ನು ಇಲ್ಲಿ ಕಾಣಬಹುದು. ಹಾಗೆಯೇ ಈ ಖಂಡದಲ್ಲಿ ಸುಪ್ರಸಿದ್ಧ ರಥರೂಪಕವೂ ಬರುತ್ತದೆ. ಇದು ಕಠ, ಪ್ರಶ್ನ ಮುಂತಾದ ಹಲವು ಉಪನಿಷತ್ತುಗಳಲ್ಲೂ ಕಂಡುಬರುವ ದೃಷ್ಟಾಂತವಾಗಿದೆ.

ಮೂರನೆಯ ಮುಂಡಕದ ಮೊದಲನೆಯ ಖಂಡವು ವೇದಾಂತದಲ್ಲಿ ಬಹಳ ಪ್ರಸಿದ್ಧವಾದ ಒಂದು ಉಪಮಾನ ದೊಂದಿಗೆ ಪ್ರಾರಂಭವಾಗುತ್ತದೆ: **ದ್ವಾ ಸುಪರ್ಣಾ ಸಯುಜಾ ಸಖಾಯಾ** – ಪರಸ್ಪರ ಸ್ನೇಹಿತರಾದ ಎರಡು ಪಕ್ಷಿಗಳು ಯಾವಾಗಲೂ ಜೊತೆಯಲ್ಲಿರುತ್ತವೆ. ಒಂದು ಪಕ್ಷಿ ಸವಿಯಾದ ಹಣ್ಣನ್ನು ತಿನ್ನುತ್ತಿದೆ. ಇನ್ನೊಂದು ಏನನ್ನೂ ತಿನ್ನದೆಯೇ ಹಾಗೆಯೇ ಸುಮ್ಮನೆ ನೋಡುತ್ತಿದೆ. ಅವು ಕುಳಿತುಕೊಂಡಿರುವ ವೃಕ್ಷವೇ ಸರ್ವಕರ್ಮಫಲಕ್ಕೆ ಆಶ್ರಯವಾಗಿರುವ ಶರೀರವೆಂಬ ಕ್ಷೇತ್ರ. ಅದನ್ನು ಆಶ್ರಯಿಸಿಕೊಂಡಿರುವ **ಜೀವ** ಮತ್ತು **ಈಶ್ವರ** – ಈ ಎರಡು ತತ್ತ್ವಗಳನ್ನು ಈ ಎರಡು ಪಕ್ಷಿಗಳು ಸಂಕೇತಿಸುತ್ತವೆ. ಜೀವಾತ್ಮನು ಸುಖದುಃಖರೂಪದಲ್ಲಿರುವ ಕರ್ಮಫಲವನ್ನು ಉಪಭೋಗಿಸುತ್ತಿದ್ದಾನೆ. ನಿತ್ಯಶುದ್ಧಮುಕ್ತನಾದ ಈಶ್ವರನು ಸಾಕ್ಷೀಭಾವದಿಂದ ಎಲ್ಲವನ್ನೂ ನೋಡುತ್ತಿದ್ದಾನೆ. ಯಾವಾಗ ಜೀವನು ಈಶ್ವರಸ್ವರೂಪವಾದ ಚೈತನ್ಯವೇ ತನ್ನ ನಿಜಸ್ವರೂಪವೂ ಹೌದೆಂದು ಅರಿತುಕೊಳ್ಳುತ್ತಾನೋ, ಆಗ ಆವನು ಕೃತಕೃತ್ಯನಾಗುತ್ತಾನೆ. ಇಂಥ ಜ್ಞಾನಕ್ಕೆ ಸತ್ಯ, ಏಕಾಗ್ರತೆ, ಚಿತ್ತಶುದ್ಧಿ ಮುಂತಾದವು ಸಹಕಾರಿ ಸಾಧನಗಳು. ಈ ಖಂಡ ದಲ್ಲಿಯೇ ನಮ್ಮ ದೇಶದ ಧ್ಯೇಯವಾಕ್ಯವಾದ, **'ಸತ್ಯಮೇವ ಜಯತೇ, ನಾನೃತಂ'** – 'ಸತ್ಯವೇ ಜಯಿಸುತ್ತದೆ, ಸುಳ್ಳಲ್ಲ' ಎನ್ನುವ ಸೂಕ್ತಿಯುಳ್ಳ ಮಂತ್ರವೂ ಬರುತ್ತದೆ.

ಯಾರು ನಿಷ್ಕಾಮಭಾವದಿಂದ ಈ ಪರತತ್ತ್ವವನ್ನು ಸೇವಿಸುವರೋ, ಅವರು ಸಂಸಾರದಿಂದ ಬಿಡುಗಡೆ ಹೊಂದು ತ್ತಾರೆ. ಈ ಉಪನಿಷತ್ತಿನ ಕೊನೆಯ ಖಂಡದಲ್ಲಿ ಯುಕ್ತಾತ್ಮರು ಪರಮಧಾಮವಾದ ಬ್ರಹ್ಮವನ್ನು **(ಪರಮಂ ಬ್ರಹ್ಮ ಧಾಮ)** ಸೇರುವ ಕ್ರಮ ಮತ್ತು ಮುಕ್ತಿಯ ಸ್ವರೂಪವನ್ನು ದೃಷ್ಟಾಂತಗಳ ಮೂಲಕ ಮನೋಜ್ಞವಾಗಿ ನಿರೂಪಿಸಲಾಗಿದೆ. ಮೋಕ್ಷಕಾಲದಲ್ಲಿ ಎಲ್ಲ ಉಪಾಧಿಗಳೂ ನಾಶವಾಗಿ (ಘಟಾಕಾಶವು ಮಹಾಕಾಶವನ್ನು